


### ಅಪೂರ್ವ ಮಾಹಿತಿ

ಮಂಗಳವಾರವೇ ಕೈಸೇರಿದ ಸುಧಾದಲ್ಲಿ ಆಂಧ್ರದ ಮುಖ್ಯಮಂತ್ರಿ ವೈಎಸ್‌ಆರ್ ರೆಡ್ಡಿ ಅವರ ಕುರಿತ ದುರಂತ ನಾಯಕನ ದುರ್ಮರಣ ಬರಹಗಳು ಮನ ಕಲಕುವಂತಿದ್ದವು. ಲೋಹದ ಹಕ್ಕಿಗಳೆಷ್ಟು ಸುರಕ್ಷಿತ ಲೇಖನಗಳಲ್ಲಿ ಹೆಚ್ಚಿನ ಮಾಹಿತಿ ಇತ್ತು.

-ನೆ.ಲ.ರಾಂ, ಬಿ.ಎಸ್.ರಮೇಶ್ ಬೆಂಗಳೂರು/ ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ರಮಜಾನ ಕೊರ್ತಿ, ಬದಾಮಿ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ದುರಂತದ ವೈಭವೀಕರಣ!

ವೈಎಸ್‌ಆರ್ ಸಾವಿನ ಷಾಕಿಗೆ ಆಂಧ್ರಪ್ರದೇಶದಲ್ಲಿ ನೂರಕ್ಕೂ ಅಧಿಕ ಜನಸಾಮಾನ್ಯರು ನಿಜಕ್ಕೂ ಸತ್ತು ಹೋದರೆ? ಅಥವಾ ಇದು ಕಾಂಗ್ರೆಸ್ ಸೃಷ್ಟಿಸಿದ ಕಥೆಯೇ? ಆದರೆ ಜನ ಹೀಗೆ ಸತ್ತುಹೋದದ್ದು ನಿಜವೇ ಆಗಿದ್ದರೆ, ಅದು ನಿಜಕ್ಕೂ ಬಾರೀ ದುರಂತ! ಈ ಕುರಿತು ಬರೆಯುವುದು ಬಿಟ್ಟು ವೈಎಸ್‌ಆರ್ ಸಾವು ಕುರಿತು ಮಾತ್ರ ಒತ್ತುಕೊಟ್ಟಿರುವುದು ಜನ ವಿರೋಧಿ ನೀತಿಯೆನ್ನಿಸಿತು. ವೈಎಸ್‌ಆರ್ 1426 ಕಿ.ಮೀ. ಪಾದಯಾತ್ರೆ ಮಾಡಿದ್ದು ಶ್ಲಾಘನೀಯ. ಇದೂ ಕೂಡ ರಾಜಕೀಯ ಉದ್ದೇಶವನ್ನೇ ಹೊಂದಿದ್ದರೂ, 'ಪಾದಯಾತ್ರೆ' ರಾಜಕಾರಣದ ಹಾಗೂ ಸಮಾಜದ ಶುದ್ಧೀಕರಣಕ್ಕೆ ಅತ್ಯಂತ ಅವಶ್ಯವಾದ್ದರಿಂದ, ಈ ಕುರಿತು ಇನ್ನಷ್ಟು ಬರೆಯಬಹುದಿತ್ತು. ಆದರೆ ಸುದ್ದಿಯ ಧಾವಂತದಲ್ಲಿ 'ಸುಧಾ' -ಕೂಡ ದುರಂತದ ವೈಭವೀಕರಣಕ್ಕಿಳಿದದ್ದು ಸರಿಯಲ್ಲ.

-ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಮುದ ನೀಡಿತು

ಡಾ.ಎಂ.ವೆಂಕಟಸ್ವಾಮಿಯವರ 'ತವಾಂಗ್ ಬೌದ್ಧಾಶ್ರಮದ ಸುತ್ತ' ಲೇಖನ ಮನಸ್ಸಿಗೆ ಮುದ ನೀಡಿತು.

-ನಂದಿನಿ ಕನಕರಾಜು, ಕುಶಾಲನಗರ/ ವೈ.ಎಂ.ಚಂದ್ರಶೇಖರ್, ಸಿದ್ದಾಪುರ

### ಮಾಹಿತಿ

ಪಾಂಡಿಚೇರಿ ಬಳಿಯ 'ಅರೋವಿಲ್ಲೆ' ಕುರಿತು ಕೇಳಿ ತಿಳಿದಿದ್ದ ನಮಗೆ ಅಲ್ಲಿನ ಬದುಕಿನ ಶೈಲಿಯನ್ನು ಪರಿಚಯಿಸಿರುವ 'ಸುಧಾ' ಲೇಖನ ಕುತೂಹಲದೊಂದಿಗೆ ಸಾಕಷ್ಟು ಮಾಹಿತಿ ಒದಗಿಸಿದೆ.

- ರಾಜಶೇಖರ್ ಶೆಟ್ಟಿ, ದೊಡ್ಡಬಳ್ಳಾಪುರ/ ನರೇಂದ್ರ ಸಿರಕಜೆ, ಮೈಸೂರು

### ಅಲೌಕಿಕ ಅನುಭವ

ಹೊರ ಜಗತ್ತಿನಲ್ಲಿ ಕಾಣುವ-ಮಾನಸಿಕವಾಗಿ ನಮ್ಮನ್ನು ಹೈರಾಣ ಮಾಡುವ ಅರಿಷಡ್ವರ್ಗಗಳಿಗೆ ಆರೋವಿಲ್ಲೆಯಲ್ಲಿ ಪ್ರವೇಶವಿಲ್ಲ. ಧ್ಯಾನಮಂದಿರ ಪ್ರವೇಶಿಸುತ್ತಿದ್ದಂತೆ ನಮ್ಮನ್ನು ನಾವೇ ಮರೆಯುವ ಅನುಭವ ನನ್ನದು.

-ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಕೆಎಸ್‌ನ ದಂಪತಿಗೆ ಗೌರವ

ಕವಿ ಪತ್ನಿ ಮತ್ತು ಕವಿಯ ಕಾವ್ಯ ನಾಯಕಿ- ಇವರಿಬ್ಬರ ವ್ಯಕ್ತಿತ್ವವನ್ನು ಸಮೀಕರಿಸಿ ಬರೆದ ಕೆ.ಎಸ್. ನೀಳಾ ಅವರ 'ಪದುಮ'ಳು ಇನ್ನಿಲ್ಲ! ಲೇಖನ ಆಪ್ತ ಧಾಟಿಯಲ್ಲಿದ್ದು, ವೆಂಕಮ್ಮ ಮತ್ತು ಕೆ.ಎಸ್‌ನ- ಇಬ್ಬರ ಮೇಲೂ ಇರುವ ಪ್ರೀತಿ, ಗೌರವಗಳಿಗೆ ಸಾಕ್ಷಿಯಾಗಿದೆ.

-ಜಿ.ಎಸ್. ಉಬರಡ್ಕ, ಸುಳ್ಯ/ ಪ್ರಭಾ ಪ್ರಸಾದ್, ಶ್ರೀನಾಥ ಕೊನೇಟಿ, ಬೆಂಗಳೂರು

### ಪರಿಣಾಮಕಾರಿ

'ಪರಿಣಾಮ ಭೀತಿ'ಯ ಒಳ-ಹೊರ ಹರವುಗಳನ್ನು ಪರಿಣಾಮಕಾರಿಯಾಗಿ ವಿವರಿಸುವಲ್ಲಿ ಸಮರ್ಥರಾಗಿರುವ ವೈನತೇಯ ಅಭಿನಂದನಾರ್ಹರು.

-ಸೊಂ.ನಾ. ಶ್ರೀಧರಮೂರ್ತಿ, ದಾವಣಗೆರೆ

### ರಸಿಕ ವೀಳ್ಯದೆಲೆ!

ಜಿ.ಎಂ. ಹೆಗಡೆಯವರ 'ರಸಿಕತೆಯ ಸಂಕೇತ ವೀಳ್ಯದೆಲೆ' ಲೇಖನ ರಸವತ್ತಾಗಿತ್ತು.

-ಮಹೇಶ್ ಹೆಗಡೆ ಹೆಗ್ಲೆ, ಕುಮಟಾ

### ಸಾರ್ಥಕ

ಸುಲಭ ಶೌಚಾಲಯಗಳ ಕಲ್ಪನೆಯನ್ನು ಸಾಕಾರಗೊಳಿಸಿದ ಅದರ ಜನಕ ಬಿಂದೇಶ್ವರ ಪಾಠಕ್‌ರ ಕುರಿತು ಪರಿಚಯಾತ್ಮಕ ಲೇಖನವು ಸಾಧಕನೊಬ್ಬನನ್ನು ನೆನಪಿಸುವ ಸಾರ್ಥಕ ಕೆಲಸ ಮಾಡಿದೆ.

-ಎಂ.ಜಿ.ಆರ್. ಶೇಖರ್, ದೊಡ್ಡಬಳ್ಳಾಪುರ

### ಉತ್ತಮ ಹಾಸ್ಯ

'ಗವುಸು ಮುಖಿಯ ವಧು ಪರೀಕ್ಷೆ' ತುರುವೇಕೆರೆ ಪ್ರಸಾದರ ಹಾಸ್ಯ ಲೇಖನ ಹೊಟ್ಟೆ ತುಂಬಾ ನಗಿಸಿತು. ಇಂಥಹ ಹಾಸ್ಯ ಲೇಖನಗಳು ಮತ್ತಷ್ಟು ಬರುತ್ತಿರಲಿ.

-ತರಂಗಿಣಿ, ತುಮಕೂರು

### ರೋಮಾಂಚಕಾರಿ ಧಾರಾವಾಹಿ



ಕೆ.ಎನ್. ಗಣೇಶಯ್ಯನವರ 'ಚಿತಾದಂತ' ಧಾರಾವಾಹಿಯು ಐತಿಹಾಸಿಕ ಸಂಗತಿಗಳೊಂದಿಗೆ ಆಧುನಿಕ ಸಂವೇದನೆಯನ್ನು ತುಲನೆ ಮಾಡಿ ಓದುಗರಲ್ಲಿ ಅಚ್ಚರಿಯನ್ನುಂಟು ಮಾಡುತ್ತಿದೆ. ಕಾದಂಬರಿ ರೋಮಾಂಚಕಾರಿಯಾಗಿದೆ, ಕೌತುಕವಾಗಿದೆ.

-ರಾಜಶೇಖರಗೌಡ, ಕೊಟ್ಟೂರು

### ಇಂದ್ರಜಾಲ

ಡಾ. ಕೆ.ಎನ್. ಗಣೇಶಯ್ಯನವರ 'ಚಿತಾದಂತ' ಧಾರಾವಾಹಿಯನ್ನು ಓದುತ್ತಿದ್ದರೆ, ಯಾವುದೋ ಇಂದ್ರಜಾಲ ಕಾದಂಬರಿಯನ್ನು ಓದುತ್ತಿದ್ದೇವೇನೊ ಅನಿಸುತ್ತದೆ!

-ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು

### ಪತ್ತೇದಾರಿ ಧಾರಾವಾಹಿ

ಇತಿಹಾಸದ ಗಂಭೀರ ವಸ್ತುವನ್ನು ಪತ್ತೇದಾರಿ ಕಾದಂಬರಿಯಂತೆ ಆಕರ್ಷಕವಾಗಿ ಬರೆಯುವಲ್ಲಿ ಕೆ.ಎನ್.ಗಣೇಶಯ್ಯ ಸಿದ್ಧಹಸ್ತರು. ಅವರೊಬ್ಬ ಅಪರೂಪದ ಪ್ರತಿಭಾವಂತರು. ಚಿತಾದಂತ ಧಾರಾವಾಹಿಗಾಗಿ ಪ್ರತಿ ವಾರ ಸುಧಾ ಕಾಯುವಂತಾಗಿದೆ. ಕಾದಂಬರಿ ಅಷ್ಟೊಂದು ರೋಚಕವಾಗಿದೆ.

ಬಿ.ಎಸ್.ಕರೀಗೌಡ, ಮಂಡ್ಯ

INDIRA GANDHI CORRESPONDENCE COLLEGE
Legally Approved Courses
ADMISSION OPEN FOR 2009-10
B.Ed. M.Ed. B.P.Ed. M.P.Ed.
B.Lib.Science. M.Lib.Science.
(External Courses Kannada, English & Hindi Medium)
All Degrees in HINDI can also eligible for Hindi B.Ed. Courses.
ಸೂಚನೆ : ಮೇಲ್ಕಂಡ External ಕೋರ್ಸ್‌ಗಳನ್ನು ಮನೆಯಲ್ಲಿಯೇ ಕುಳಿತು ಓದಬಹುದು ಮತ್ತು ಸದರಿ ಕೋರ್ಸ್‌ನ ಪದವಿಗಳಿಗೆ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಿಂದ ಶಿಕ್ಷಕರು ಮುಂಬಡ್ತಿ ಪಡೆಯಬಹುದು.
# 27, Park Road, Thulasi Thottam,Near Megestic, Opp Srinivasa Nursing Home, BANGALORE-53
Ph: 080-22381262, 22373264 Mob: 9379297702, 9740054983, 9663191120